


# ಮೋಡಿ

## ಇದು ಚಿತ್ರಕಥೆಯಲ್ಲ, ವಾಸ್ತವ ಕಥನ

‘3ಡಿ’ ತಂತ್ರಜ್ಞಾನ ಎಂದೊಡನೆ ಕಣ್ಣಮುಂದೆ ಬರುವುದು ಕಿನ್ನರಲೋಕವನ್ನು ಸೃಷ್ಟಿಸುವಂತಹ ಸಿನಿಮಾಗಳು. ಸಿನಿಮಾದಲ್ಲಿನ ದೃಶ್ಯಮಾಂತ್ರಿಕತೆ ನಮ್ಮ ಪಂಚೇಂದ್ರಿಯಗಳ ಅನುಭವಕ್ಕೆ ತರುವ ರಮ್ಯಭ್ರಮೆಯನ್ನು ‘3ಡಿ’ ಸಿನಿಮಾಗಳು ಉಂಟುಮಾಡುತ್ತವೆ. ಭ್ರಮಾಜಗತ್ತಿನಿಂದ ಆಚೆಗೂ, ವಾಸ್ತವ ಜಗತ್ತಿನಲ್ಲಿ 3ಡಿ ತಂತ್ರಜ್ಞಾನ ನಿಧಾನವಾಗಿ ತನ್ನ ಇರುವು ಪ್ರಕಟಪಡಿಸುತ್ತಿದೆ. ‘3ಡಿ ಪ್ರಿಂಟಿಂಗ್ ಮನೆ’ಗಳ ಪರಿಕಲ್ಪನೆ ಈಗ ವಿಶ್ವದ ವಿವಿಧೆಡೆಗಳಲ್ಲಿ ಜನಪ್ರಿಯವಾಗುತ್ತಿದೆ. ಕಡಿಮೆ ಖರ್ಚು ಹಾಗೂ ಅತ್ಯಂತ ಕಡಿಮೆ ಸಮಯದಲ್ಲಿ ರೂಪುಗೊಳ್ಳುವ ಈ ಮನೆಗಳು, ಸೂರಿನ ಅಭಾವವನ್ನು ನೀಗಿಸುವ ನಿರೀಕ್ಷೆಯಿದೆ. ಭಾರತ ಕೂಡ 3ಡಿ ತಂತ್ರಜ್ಞಾನ ವಲಯದಲ್ಲಿ ನಿಧಾನವಾಗಿ ತನ್ನ ಛಾಪು ಕಂಡುಕೊಳ್ಳುತ್ತಿದೆ. ಬನ್ನಿ, ‘3ಡಿ ಕನ್ನಡಕ’ ಇಲ್ಲದೆಯೇ 3ಡಿ ಜಗತ್ತಿನ ಪರಿಚಯ ಮಾಡಿಕೊಳ್ಳೋಣ.

■ ಗುರುರಾಜ್ ಎಸ್. ದಾವಣಗೆರೆ

